ನೋಡಿ' ಅಂತಂದ ಕೂಡಲೇ ಸೀತಣ್ಣ 'ಹಾಗಾಗಿಯೇ ಅಲ್ಲವೇ ಕಂಪ್ಯೂಟರ್ ಎಂಜಿನಿಯರಿಂಗ್‌ನಲ್ಲಿ ಗೋಲ್ಡ್ ಮೆಡಲ್ ಪಡೆದದ್ದು' ಅಂತ ಹೇಳಿದಾಗ ನಾನು ವಿಸ್ಮಿತನಾದೆ. 'ಆದ್ರೆ, ಇದೀಗ ನಾನು ಮಾಜಿ ಟೆಕ್ಕಿ' ಎಂದರು. 'ಅಂದ್ರೆ?' ನನಗೆ ಅರ್ಥವಾಗಲಿಲ್ಲ. 'ಹದಿನಾಲ್ಕು ವರ್ಷ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಕಂಪನಿಯಲ್ಲಿ ನಿಯತ್ತಾಗಿ ಕೆಲಸ ಮಾಡಿ, ಹೆಸರು ಗಳಿಸಿ, ಸಿಇಓ ಅಂತ ಪ್ರಮೋಶನ್ ಬರುವಾಗ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕೃಷಿ ಕ್ಷೇತ್ರವನ್ನು ಆರಿಸಿಕೊಂಡಿದ್ದಾಯ್ತು.' ಸೀತಣ್ಣ ಅರ್ಧ ಸಂತೋಷ, ಅರ್ಧ ವಿಷಾದದಿಂದ ಹೇಳುವಾಗ ನನಗೆ ಮಾತೇ ಹೊರಡಲಿಲ್ಲ. ಎಂಟೂವರೆಗೆ ಊಟಕ್ಕೆ ಕರೆ ಬಂದಾಗ ಇಂದ್ರಕುಮಾರ್, 'ನನ್ನ ಉಳಿದ ಕತೆ ವಿರಾಮದ ನಂತರ. ಊಟ ಮಾಡುವಾಗ಼್ಲೂ ಇದೇ ಪುರಾಣ ಬಿಚ್ಚಿದ್ರೆ ಮ್ಯಾಡಮ್ ಗರಮ್ ಆಗ್ತಾರೆ, ಅಲ್ಲವಾ?' ಅಂತ ನೇಹಾಳತ್ತ ನೋಡಿ ನಕ್ಕ. ಆಕೆ ನಕ್ಕೂ ನಗದವಳಂತೆ ಇದ್ದು ಬಿಟ್ಟಳು.

★★★

ಅತಿಥಿಗಳೇನೋ ವಾಪಸಾದರು. ಆದರೆ ಇಂದ್ರಕುಮಾರರ ವಿಕ್ಷಿಪ್ತತೆ ನನ್ನನ್ನು ಚಿಂತನೆಯ ಒರೆಗಲ್ಲಿಗೆ ಹಚ್ಚಿತು. ಪ್ರತಿಷ್ಠಿತ ಕಂಪನಿಯ ಸಿಇಓ ಹುದ್ದೆಯ ಕೈತುಂಬ ಸಂಬಳದ ಪ್ಯಾಕೇಜನ್ನು ಏಕಾಏಕಿ ಬಿಸಾಕಿ ಅನಿಶ್ಚತತೆಯ ಕೃಷಿ ಕ್ಷೇತ್ರವನ್ನು ಆಯ್ಕೆ ಮಾಡಿದ್ದರ ಹಿಂದಿನ ಉದ್ದೇಶ ಅಥವಾ ತರ್ಕ ನನಗೆ ಅರ್ಥವಾಗಲಿಲ್ಲ. ಕಾರಣ ನಾವೆಲ್ಲ ಯಾವಾಗಲೂ ಭದ್ರತೆಯ ಬೆನ್ನು ಬೀಳುವವರು. ಮಕ್ಕಳಿಗೆ ಎ ಬಿ ಸಿ ಡಿ ಕಲಿಸುವುದರಿಂದಲೇ ಮುಂದೆ ಅವರು ವೈದ್ಯರೋ ಎಂಜಿನಿಯರೋ ಆಗಿ ವಿದೇಶಕ್ಕೆ ತೆರಳಿ ಕೈತುಂಬ ಕಾಸು ಸಂಪಾದಿಸಿ ಸಂಸಾರದಲ್ಲಿ ಯಾವುದೇ ತೊಂದರೆ–ತಾಪತ್ರಯವಿಲ್ಲದೇ ಜೀವನವನ್ನು ನೆಮ್ಮದಿಯಿಂದ ನಡೆಸುವಂತಾಗಬೇಕು, ಸಮಾಜದಲ್ಲಿ ಒಂದು 'ಜನ' ಅಂತ ಅನ್ನಿಸಿಕೊಳ್ಳಬೇಕು ಎನ್ನುವ ದೂರಾಲೋಚನೆ ನಮಗೆ ಇರುತ್ತದೆಯೇ ವಿನಾ ಮಕ್ಕಳು ಗಳಿಕೆಯ ಬೆನ್ನು ಹತ್ತದೇ ವಿದ್ಯಾವಂತರಾಗಿ, ದೇಶದ ಹೆಮ್ಮೆಯ ಸತ್ಪ್ರಜೆಯಾಗಿ ಸರ್ವೇ ಜನಾ ಸುಖಿನೋ ಭವಂತು ಅಂದುಕೊಂಡು ಒಂದು ಮೌಲ್ಯಾಧಾರಿತ ಜೀವನವನ್ನು ನಡೆಸಲಿ ಅಂತ ಅಲ್ಲವೇ ಅಲ್ಲ. ಅಕ್ಷರ ಹಾಗೂ ಆದಾಯ ಎರಡಕ್ಕೂ ಅವಿನಾಭಾವ ಸಂಬಂಧವುಂಟು ಎನ್ನುವದು ಇಂದು ಒಬ್ಬ ಹಳ್ಳಿ ಮುಕ್ಕನಿಗೂ ಗೊತ್ತುಂಟು, ಅಂತಹದರಲ್ಲಿ ಈ ಇಂದ್ರಕುಮಾರ ಅನ್ನುವವರು...

'ರೀ' ಅನ್ನುವ ಮನೆಯೊಡತಿಯ ಮಾಮೂಲಿ ಕರೆ ನನ್ನ ಚಿಂತನೆಗೆ ಬ್ರೇಕ್ ಹಾಕಿತು. 'ಏನು ಸಾಯಿಬಾ?' ಅಂದೆ. ಗೋಡೆಯ ಮೇಲಿನ ಗಡಿಯಾರ ಹತ್ತು ಬಾರಿ ಬಡಿದು ಅದರಷ್ಟಕ್ಕೆ ಅದು ಸುಮ್ಮನಾಯಿತು. ನೇಹಾ ಸೋಫಾದ ಮೇಲೆ ಕಾಲು ಮೇಲೆ ಕಾಲು ಹಾಕಿ ಕುಳಿತು ಹೇಳಿದಳು – 'ಇನ್ನು ಮುಂದೆ ಆ ಇಂದ್ರಕುಮಾರ್ ನಮ್ಮ ಮನೆಯೊಳಗೆ ಕಾಲಿಡೋದು ಬೇಡ'. ಅದು ನ್ಯಾಯಾಧೀಶನೊಬ್ಬ ತನ್ನ ಅಂತಿಮ ತೀರ್ಪನ್ನು ಓದಿ ಹೇಳಿ ಸುತ್ತಿಗೆಯಿಂದ ಕುಟ್ಟಿದಂತಿತ್ತು. ನಾನು ಹುಸಿ ನಗೆ ಚೆಲ್ಲುತ್ತ, 'ಯಾಕೆ ಅಂತ ಕೇಳಬಹುದಾ, ಮ್ಯಾಡಮ್?' ಅಂದೆ. 'ನೀವು ಬ್ಯಾಂಕ್ ಒಂದರ ಮ್ಯಾನೇಜರ್ ಆಗಿದ್ದೇನೋ ಹೌದು. ಆದ್ರೆ ನಿಮಗೆ ಜನರನ್ನು ಅಳೇಲಿಕ್ಕೆ ಬರೂದಿಲ್ಲ' ಅಂತ ಕಟಕಿಯಾಡಿದಳು. 'ಹಾಗೇನಿಲ್ಲ, ಅವರು ಅಜಮಾಸ್ ಐದು ಫೂಟು ಎರಡಿಂಚು ಇರಬಹುದು' ಅಂತ ಜೋಕ್ ಕಟ್ ಮಾಡಿದೆ. 'ಸುಮ್ಮನೇ ಏನಾದ್ರೂ ಮಾತಾಡಬೇಡಿ. ಮದುವೆಯಾಗದೇ ಒಂದು ಹೆಣ್ಣಿನ ಜೊತೆ ಅಪಾಪೋಲಿಯಂತೆ ರಾಜಾರೋಷವಾಗಿ ಇರುತ್ತಾನೆಂದ್ರೆ ಅವನಿಗೆ ಹೆಂಗಸರ ಬಗ್ಗೆ ಎಂತಹ ಕ್ಷುಲ್ಲಕ ಭಾವನೆ ಉಂಟು ಅಂತ ತಿಳೀತದೆ.' 'ಅದೀಗ ಫ್ಯಾಷನ್ ಆಗಿ ಹೋಗಿ ಬಹಳ ಕಾಲವಾಯ್ತು ಮಾರಾಯ್ತಿ. ಅದಕ್ಕೆ ಇಂಗ್ಲೀಷಿನಲ್ಲಿ 'ಲಿವಿಂಗ್ ಟು ಗೆದರ್' ಅಂತ ಹೇಳ್ತಾರೆ' ಎಂದೆಲ್ಲಾ ವಿವರಣೆ ನೀಡಿದೆ. 'ಹೋಯ್, ಅದು ನನಗೂ ಗೊತ್ತುಂಟು. ಆದರೆ ಹಲ್ಕಾ